ಹೀಗೆ ಈಗೆರಡು ದಿನದ ಹಿಂದೆ ನಾಗಪುರ ಬಳಿಯ ಹಳ್ಳಿಯೊಂದರಲ್ಲಿ ಕಾರ್ಯಕ್ರಮಕ್ಕಾಗಿ ಆಗ್ರಹದ ಆಹ್ವಾನ ಬಂದದ್ದು. ಅನಿರೀಕ್ಷಿತವಾಗಿ ವಿಪರೀತ ಮಳೆ ಬಂದದ್ದರಿಂದ ಕೆಸರಿನ ರಾಡಿಯಾಗಿದ್ದ ಊರಲ್ಲಿ ಕಾರ್ಯಕ್ರಮಕ್ಕಾಗಿ ಜನ ಕಿಕ್ಕಿರಿದು ತುಂಬಿದ್ದರು. ಅವನು ಕಾರಿನಿಂದ ಇಳಿಯುತ್ತಿದ್ದಂತೆಯೇ ಜನರು ಮುಗಿಬಿದ್ದು ಕಾಲು ಮುಟ್ಟಿ ನಮಸ್ಕಾರ ಮಾಡತೊಡಗಿದ್ದರು. ಮುಜುಗರಪಟ್ಟುಕೊಂಡರೂ ಜನರ ಮಧ್ಯೆ ಸೇರಿ 'ಸೆಲ್ಫಿ, ಆಟೋಗ್ರಾಫ್' ಎಲ್ಲಾ ಮುಗಿಸಿ ವೇದಿಕೆ ತಲುಪುವಷ್ಟರಲ್ಲೇ ಸುಸ್ತೆನಿಸಿತ್ತು.

ಮನಸ್ಸು ಅಂತರ್ಮುಖಿಯಾಗಿ ಏನೇನೋ ದಂಗೆಯ ಮಾತುಗಳನ್ನು ಹೇಳುತ್ತಿತ್ತು. ತನಗೆ ಬೇಕಾದ ರಾಗ ಹಾಡಲು ಅವಕಾಶವಾದರೂ ಈಗ ಎಲ್ಲಿದೆ? ಫರ್ಮಾಯಿಷ್‌ಗಳ ಚೀಟಿ ಮುಂದಿರುತ್ತದಲ್ಲ!



ಎಲ್ಲವೂ ಹಾಡಿ ಹಾಡಿ ಸವಕಲಾದ ಹಾಡುಗಳನ್ನೇ ಯಾಕೆ ಮತ್ತೆ ಮತ್ತೆ ಕೇಳುತ್ತಾರೆ... ಎಂದು ಮನಸ್ಸು ಮುಷ್ಕರ ಹೂಡುತ್ತಿತ್ತು. ಯಾವುದಿದು ಅಂತರಂಗದಲ್ಲಿ ಕೇಳುತ್ತಿರುವ ರಾಗ ಎಂದು ಕಿವಿಗೊಡಲು ಯತ್ನಿಸಿದ. ವೇದಿಕೆಯಲ್ಲಿ ಸಂಘಟಕರು ಏಕನಾಥನ ಪರಿಚಯ ಓದಿ ಸ್ವಾಗತ ಭಾಷಣ ಮಾಡುತ್ತಿದ್ದರು. ಇಲ್ಲಿ ನೋಡಿದರೆ ಮನದೊಳಗೊಂದು ರಾಗವೆದ್ದು ಕುಳಿತಂತಿದೆ. ಅದೇ... ಜೋಡ್ ರಾಗದ ಬಂದೀಶ್‌ಗಳು. ಅಂದು ಗುರುಗಳು ಬರೆಸಿದ ಹಳೇ ನೋಟ್‌ಬುಕ್‌ನಿಂದ ಒಂದೊಂದೇ ಅಕ್ಷರಗಳೆದ್ದು ಬಂದು ಏಕನಾಥನ ಮುಂದೆ ಫರ್ಮಾಯಿಷ್‌ಗಳನ್ನು ಇಡುತ್ತಿವೆ ಎಂದು ಅನಿಸಲಾರಂಭಿಸಿತು.

'ಅಯ್ಯೋ, ನನ್ನ ಗುರುಗಳು ರಚಿಸಿದ ಈ ಬಂದೀಶ್ ಕೇಳಿರೋ, ಈ ರಾಗವನ್ನೊಂದು ಹಾಡಿಬಿಡಲೇ' ಎಂದು ಮನಸ್ಸು ಚೀರಬೇಕೆನಿಸುತ್ತದೆ. 'ಬೇಡ, ಅದರಿಂದ ಈಗೇನೂ ಪ್ರಯೋಜನವಿಲ್ಲ' ಎಂದು ಬಹಿರಂಗವು ಸಾಂತ್ವನ ಹೇಳಿತು. ಎಂದಿನಂತೆ ಗಾಯನ ಮುಕ್ತಾಯಕ್ಕೆ ಬಂತು. ಚೀಟಿಗಳನ್ನು ಕೈಗೆತ್ತಿಕೊಂಡು ಕೋರಿಕೆಗಳನ್ನು ಸ್ವೀಕರಿಸಿ ಹಾಡುಗಳನ್ನು ಹೇಳಿದ್ದಾಯಿತು.

ಜನರ 'ವಾಹ್', 'ಕ್ಯಾ ಬಾತ್' ಚಪ್ಪಾಳೆ, ಸಿಳ್ಳೆಗಳ ಮಧ್ಯೆ ಎರಡು ಗಂಟೆ ಹಾಡಿ ಮುಗಿಸಿ ಮತ್ತೆ ಜನಸಂದಣಿ ಮಧ್ಯೆ ನುಗ್ಗಿ ಸಭಾಂಗಣದ ಹೊರಗೆ ತಲುಪಿದಾಗಲೇ ಅಲ್ಲಿ ತನ್ನ ಚಪ್ಪಲ್ ಇಲ್ಲದ್ದು ಗಮನಕ್ಕೆ ಬಂದದ್ದು. ಆಯೋಜಕರು ಎಲ್ಲಾ ಕಡೆ ಹುಡುಕಿಸಿದರೂ ಸಿಗದೆ ಇದ್ದಾಗ, ಕೆಸರಿನಲ್ಲಿ ಪಚಗುಟ್ಟಿಸಿಕೊಳ್ಳುತ್ತಾ ಬರಿಗಾಲಲ್ಲಿ ಕಾರು ಹತ್ತಿ ಬಂದ.

ಬಹು ಕಾಲ ಆಸೆಪಟ್ಟು ಸಿನಿಮಾದ ರಾಜನ ಪಾತ್ರಧಾರಿ ಧರಿಸುವಂಥ ಈ ಜರಿ ಚಪ್ಪಲ್ಲನ್ನು ಕೊಂಡಿದ್ದ ಏಕನಾಥ, ಅದರ ಚಂದ ನೋಡಿ ಯಾರೋ ಒಯ್ದಿರಬೇಕು ಎಂದುಕೊಂಡು ಮನಸ್ಸಲ್ಲೇ ನಕ್ಕು ಸುಮ್ಮನಾಗಿದ್ದ.

ಈ ದಿನ ಬೆಳಿಗ್ಗೆ ಹಾಸಿಗೆಯಲ್ಲಿದ್ದಾಗಲೇ ಫೋನ್ ಶಬ್ದ ಕೇಳಿ ಎಚ್ಚರವಾಗಿ ರಿಸೀವ್ ಮಾಡಿದಾಗ ಆ ಕಡೆಯಿಂದ ಧ್ವನಿ ಸ್ಪಷ್ಟವಾಗಿ ಕೇಳಿತ್ತು:

'ನನ್ನನ್ನು ಕ್ಷಮಿಸಿ, ನಿಮ್ಮ ಚಪ್ಪಲ್ಲುಗಳನ್ನು ಎತ್ತಿಕೊಂಡವನು ನಾನು. ನಿಮ್ಮ ಗಾಯನ ಕೇಳಿ ಹುಚ್ಚಾಗಿದ್ದೇನೆ. ನಿಮ್ಮ ಜೋಡುಗಳನ್ನಿಟ್ಟು ಪೂಜಿಸುತ್ತೇನೆ' ಎನ್ನುತ್ತಲೇ ಫೋನ್ ಕಟ್ ಆಗಿತ್ತು.

ದಿಗ್ಭ್ರಾಂತನಾದ ಏಕನಾಥ, ತಾನು ದೈವಸ್ವರೂಪಿ ಆದದ್ದು ಯಾವಾಗ ಎಂದು ಯೋಚಿಸುತ್ತಲೇ ಎದುರಿಗಿದ್ದ ಗವಾಯಿಗಳ ಫೋಟೊ ನೋಡುತ್ತಾ – 'ಛೇ, ನಾನೂ ಅವರ ಚಪ್ಪಲ್ಲುಗಳನ್ನು ತಂದುಬಿಟ್ಟಿದ್ದರೆ ಪೂಜಿಸಬಹುದಿತ್ತು' ಎಂದುಕೊಳ್ಳುತ್ತಿದ್ದಂತೆ, 'ಅವರ ಕಾಲುಗಳಲ್ಲಿ ಎಂದಾದರೂ ಚಪ್ಪಲ್ಲುಗಳು ಇದ್ದವೇ ಇಲ್ಲವೇ' ಎಂಬುದು ನೆನಪಾಗದೇ ವ್ಯಾಕುಲಚಿತ್ತನಾದ.

●